ಮಡಕೇರಿ - ಕಡಮಕಲ್ - ಸುಬ್ರಮಣ್ಯ ರಸ್ತೆಯ ಅಭಿವೃದ್ಧಿ

141 - ಶ್ರೀ ಡಿ.ಎನ್. ಮಾದಪ್ಪ (ಮಡಕೇರಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಡಕೇರಿ-ಕಡಮಕಲ್-ಸುಬ್ರಮಣ್ಯ ರಸ್ತೆ ಲೋಕೋಪಯೋಗಿ ಇಲಾಖೆಗೆ ಸೇರಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಗಾಳಿಬೀಡಿಗಾಗಿ ಹಾದು ಹೋಗುವ ಈ ರಸ್ತೆ ಸುಬ್ರಮಣ್ಯ ಧರ್ಮಸ್ಥಳ, ಉಡುಪಿಗೆ ಅತ್ಯಂತ ಸಮೀಪವಾಗಿದ್ದು, ಈ ರಸ್ತೆಯ ಅಭಿವೃದ್ಧಿಗೆ ಸರ್ಕಾರವು ಗಮನಹರಿಸದಿರಲು ಕಾರಣವೇನು?

ಇ) ಸರ್ಕಾರವು ಈ ರಸ್ತೆಯನ್ನು ಅಭಿವೃದ್ಧಿ ಪಡಿಸಲು ಹೆಚ್ಚಿನ ಹಣವನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಇದು ಲೋಕೋಪಯೋಗಿ ರಸ್ತೆ ಆಗಿದೆ.

ಆ) ಒಟ್ಟಾರೆ 33 ಕಿಮೀ ರಸ್ತೆಯಲ್ಲಿ 13 ಕಿಮೀ ಡಾಂಬರು ಮಾಡಲಾಗಿದೆ 1 ಕಿಮೀ ಜಲ್ಲಿ ಹಾಕಲಾಗಿದ್ದು ಉಳಿದ ಭಾಗವನ್ನು ಅನುದಾನದ ಲಭ್ಯತೆಗೆ ಅನುಗುಣವಾಗಿ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ಇ) ಅತಿ ಹೆಚ್ಚಿನ ವಾಹನ ಸಂಚಾರ ಹಾಗೂ ಆದ್ಯತೆ ಇರುವ ರಸ್ತೆಗಳ ಅಭಿವೃದ್ಧಿಗೆ ಹೆಚ್ಚಿನ ಗಮನ ನೀಡಲಾಗುತ್ತಿದ್ದು, ಸದರಿ ರಸ್ತೆಯ ಅಭಿವೃದ್ಧಿ ಅವಶ್ಯಕತೆಯನ್ನು ಪರಿಶೀಲಿಸಲಾಗುವುದು.

ಶ್ರೀ ಡಿ.ಎನ್. ಮಾದಪ್ಪ : ಮಾನ್ಯ ಅಧ್ಯಕ್ಷರೇ, ಈ ಮಡಿಕೇರಿ-ಕಡಮಕಲ್-ಸುಬ್ರಹ್ಮಣ್ಯ ರಸ್ತೆ ಇವತ್ತು ಮಡಿಕೇರಿಯಿಂದ ಸುಬ್ರಹ್ಮಣ್ಯಕ್ಕೆ ಹೋಗಬೇಕಾದರೆ ಸುಮಾರು 105 ಕಿಲೊ ಮೀಟರ್ ಹೋಗಬೇಕಾಗುತ್ತದೆ. ಈ ರಸ್ತೆಯಾದರೆ ಕೇವಲ 50 ಕಿಲೋ ಮೀಟರ್‌ನಲ್ಲಿ ಈ ರಸ್ತೆ ಸುಬ್ರಹ್ಮಣ್ಯಕ್ಕೆ ಹೋಗುತ್ತದೆ. ಧರ್ಮಸ್ಥಳಕ್ಕೂ ಹೋಗುತ್ತದೆ. ಕಳೆದ ವರ್ಷ ಇಡೀ ಮಡಿಕೇರಿ ವಿಧಾನಸಭಾ ಕ್ಷೇತ್ರದ ಎಲ್ಲಾ ಗ್ರಾಮಗಳಿಂದ ಗ್ರಾಮದ ಜನರು ಒಂದು ತಿಂಗಳು ಶ್ರಮದಾನವನ್ನು ಮಾಡಿ ಆ ರಸ್ತೆಯಲ್ಲಿ ಓಡಾಡಲು ಹೋಗುವ ಹಾಗೆ ಮಾಡಿದ್ದಾರೆ. ಇವತ್ತು ರಾಜ್ಯದಲ್ಲೇ ಅಲ್ಲ, ರಾಷ್ಟ್ರದಲ್ಲಿಯೇ ಉತ್ತಮವಾದ ಭತ್ತ ಬೆಳೆಯುವಂಥ ಸುಮಾರು 25 ಸಾವಿರ ಎಕರೆ ಜಾಗ ಅಲ್ಲಿ ಇದೆ. ಹಾಗಾಗಿ ಈ ಎಲ್ಲಾ ದೃಷ್ಟಿಯಿಂದ ಇವತ್ತು ಮೈಸೂರಿನಿಂದ ಧರ್ಮಸ್ಥಳಕ್ಕೆ, ಸುಬ್ರಹ್ಮಣ್ಯಕ್ಕೆ ಹೋಗಬೇಕಾದರೆ ಸುಮಾರು 50 ಕಿಲೋ ಮೀಟರ್ ಉಳಿಯುತ್ತೆ. ಹಾಗಾಗಿ ಈ ರಸ್ತೆಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಬಾಕಿ ಇರುವ 20 ಕಿಲೋ ಮೀಟರನ್ನು ಎಲ್ಲರೂ ಪ್ರಯಾಣ ಮಾಡುವ ರೀತಿಯಲ್ಲಿ ಮಾಡಬೇಕು ಎಂದು ಹೇಳಿ

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೇ, ಮಡಿಕೇರಿ-ಕಡಮಕಲ್-ಸುಬ್ರಹ್ಮಣ್ಯ ರಸ್ತೆ ಗ್ರಾಮಾಂತರ ರಸ್ತೆಯಾಗಿರುವುದರಿಂದ 33 ಕಿಲೋ ಮೀಟರ್ ಉದ್ದದ ಈ ರಸ್ತೆಯಲ್ಲಿ ಈಗಾಗಲೇ 13 ಕಿಲೋಮೀಟರ್ ರಸ್ತೆಯನ್ನು ಸುಧಾರಣೆ ಮಾಡಲಾಗಿದೆ. ಇನ್ನು 14 ಕಿಲೋಮೀಟರ್ ರಸ್ತೆಗಳನ್ನು ಸುಧಾರಣೆ ಮಾಡುವ ಸಲುವಾಗಿ ಜಲ್ಲಿಯನ್ನು ಹಾಕಿ ಕೆಲಸವನ್ನು ಮಾಡಲಾಗಿದೆ. ಇನ್ನು 18.70 ಕಿಲೋ ಮೀಟರ್‌ಷ್ಟು ರಸ್ತೆಯನ್ನು ಕಡಿದಾದ ಅರಣ್ಯ ಪ್ರದೇಶದಲ್ಲಿ ಹಾದು ಹೋಗುವ ರಸ್ತೆ ಇರುವುದರಿಂದ, ಅದನ್ನು ಸರ್ವೆ ಮಾಡಿ ಹಂತ ಹಂತವಾಗಿ ಅಭಿವೃದ್ಧಿ ಮಾಡಬೇಕು ಎನ್ನುವ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಂಡಿದೆ. ಮತ್ತು ವಾಹನಗಳ ಸಾಂದ್ರತೆಯನ್ನು ಸಹಿತ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಇಲ್ಲಿ ವಾಹನಗಳ ಸಂಖ್ಯೆ ದ್ವಿಚಕ್ರವಾಹನಗಳು ಪ್ರತಿನಿತ್ಯ ಹೋಗುವುದು 855. ಟೆಂಪೋಗಳು 12, ಕಾರುಗಳು 258, ಬಸ್‌ಗಳು 23, ಲಾರಿಗಳು 28 ಈ ರೀತಿ ವಾಹನಗಳ ಸಾಂದ್ರತೆಯನ್ನು ಗಮನದಲ್ಲಿಟ್ಟುಕೊಂಡು ಅಂಥ ರಸ್ತೆಗಳಿಗೆ ಆದ್ಯತೆಯಲ್ಲಿ ಕೆಲಸ ಮಾಡಬೇಕು ಎಂದು ಹೇಳಿ ಹಣಕಾಸಿನ ಲಭ್ಯತೆಯನ್ನು ಗಮನದಲ್ಲಿಟ್ಟು ಕೊಂಡು ಅತ್ಯಂತ ಶೀಘ್ರದಲ್ಲಿ ಕೆಲಸ ಮಾಡುವ ಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಡಿ.ಎನ್. ಮಾದಪ್ಪ : ಮಾನ್ಯ ಅಧ್ಯಕ್ಷರೇ, ಇಲ್ಲಿ ರಸ್ತೆಯಾದರೆ ಖಂಡಿತವಾಗಿಯೂ ವಾಹನಗಳ ಸಾಂದ್ರತೆ ಹೆಚ್ಚುತ್ತದೆ. ಬಸ್‌ನಲ್ಲಿ ಹೋಗುವುದಕ್ಕೆ ಆಗುತ್ತಿಲ್ಲ. ಕಾರಣ 13 ಕಿಲೋ ಮೀಟರ್ ರಸ್ತೆ ತಾವು ಸರಿ ಮಾಡಿದರೆ ಖಂಡಿತವಾಗಿಯೂ ವಾಹನಗಳು ಇವತ್ತು ಮೈಸೂರಿನಿಂದ ಧರ್ಮಸ್ಥಳಕ್ಕೆ ಹೋಗಬೇಕಾದರೆ ಏನು ಸುಳ್ಯ ಮಾರ್ಗವಾಗಿ ಹೋಗುತ್ತಾರೆ, ಅದರ ಬದಲು ಈ ಕಡೆಯಿಂದಲೇ ಹೋಗಬಹುದು. ನಾನು ಆಗಲೇ ಹೇಳಿದ ಹಾಗೆ ಸುಮಾರು 50 ಕಿಲೋಮೀಟರ್ ಉಳಿಯುತ್ತೆ. ಇದರಿಂದ ತೈಲದ ಉಳಿತಾಯ, ಸಮಯದ ಉಳಿತಾಯ ಇದನ್ನು ದೃಷ್ಟಿಯಲ್ಲಿಟ್ಟಾಗ ಖಂಡಿತವಾಗಿಯೂ ತಾವು ಈ ರಸ್ತೆಗೆ ಹಣವನ್ನು ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೇ, ಆದ್ಯತೆ ಮೇಲೆ ಪರಿಶೀಲಿಸೋಣ.

ರಾಜ್ಯದಲ್ಲಿ ಕನ್ನಡ ಭವನ ನಿರ್ಮಾಣ

442 - ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ (ಬಾಗೇಪಲ್ಲಿ) : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿಯ ಮಾನ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಾಂಸ್ಕೃತಿಕ ಸಮುಚ್ಚಯ (ಕನ್ನಡ ಭವನ) ನಿರ್ಮಾಣ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ?

ಆ) ಇದ್ದಲ್ಲಿ ಎಂದಿನಿಂದ ಈ ಕಾರ್ಯವನ್ನು ಪ್ರಾರಂಭಿಸಲಾಗುವುದು? ಇಲ್ಲದಿದ್ದಲ್ಲಿ ಕಾರಣಗಳೇನು?

ಇ) ಈ ಕಾರ್ಯಕ್ರಮಕ್ಕಾಗಿ ಮೀಸಲಿಟ್ಟ ಹಣವೆಷ್ಟು?